
# ಪರೀಕ್ಷೆಗೆ ಬರೆಯುವುದು ಹೇಗೆ?

ಪರೀಕ್ಷೆಯಲ್ಲಿ ಉತ್ತರ ಬರೆಯುವುದು ಒಂದು ಕಲೆ. ಅದನ್ನು ಕಲಿಯಬೇಕು. ಪರೀಕ್ಷೆ ವಿದ್ಯಾರ್ಥಿಯ ಜೀವನದಲ್ಲಿ ಬಹು ಮುಖ್ಯವಾದ ಘಟ್ಟ. ಆದ್ದರಿಂದ ಪರೀಕ್ಷೆಯಲ್ಲಿ ಬರೆಯುವ ಕಲೆಯನ್ನು ರೂಢಿಸಿಕೊಳ್ಳುವುದು ಅತ್ಯವಶ್ಯ.

ಬಹಳ ಜನ ವಿದ್ಯಾರ್ಥಿಗಳಿಗೆ ಪರೀಕ್ಷೆ ಎಂದರೆ ಕಳವಳ. ಬೆವರು ಬರುವುದು, ಪ್ರಶ್ನೆಪತ್ರಿಕೆಯನ್ನು ನೋಡಿದೊಡನೆ ಏನೂ ತೋಚದೆ ಇರುವುದು – ಇವೆಲ್ಲ ಇದರ ಲಕ್ಷಣಗಳು. ಕೆಲವೊಮ್ಮೆ ಪರೀಕ್ಷೆಯ ಸ್ಥಳದಿಂದಲೇ ಓಡಿಹೋಗೋಣ ಎಂದು ಅನ್ನಿಸಲೂಬಹುದು. ಪರೀಕ್ಷೆಯಲ್ಲಿ ಚೆನ್ನಾಗಿ ಬರೆಯುವುದಕ್ಕೆ ಎರಡು ಅಂಶಗಳು ಬಹಳ ಮುಖ್ಯ: **೧.ಪ್ರಶ್ನೆಪತ್ರಿಕೆಗೆ ಉತ್ತರ ಬರೆಯುವ ವಿಧಾನ. ೨. ಬರೆಯಬೇಕಾದ ವಿಷಯದ ಬಗ್ಗೆ ಪರಿಜ್ಞಾನ.** ನೀವು ಈಗಾಗಲೇ ಚೆನ್ನಾಗಿ ಓದಿದ್ದೀರಿ ಎಂದುಕೊಳ್ಳೋಣ. ಈಗ ಪರೀಕ್ಷೆಗೆ ಉತ್ತರ ಬರೆಯುವುದರ ಬಗ್ಗೆ ಗಮನ ಹರಿಸೋಣ.



## ಬಹು ಆಯ್ಕೆಯ ಪ್ರಶ್ನೆಗಳನ್ನು ಉತ್ತರಿಸುವ ರೀತಿ

ಬಹು ಆಯ್ಕೆಯ ಪ್ರಶ್ನೆಗಳನ್ನು ಮೂರು ವಿಧಾನಗಳಲ್ಲಿ ಉತ್ತರಿಸಬಹುದು: ೧. ಮೊದಲ ಪ್ರಶ್ನೆಯಿಂದ ಆರಂಭಿಸಿ, ಕೊನೆಯನ್ನು ತಲುಪುವ ತನಕ, ಒಂದಾದ ಮೇಲೊಂದು ಪ್ರಶ್ನೆಗಳಿಗೆ ಉತ್ತರವನ್ನು ಗುರುತಿಸುತ್ತ ಹೋಗುವುದು; ಮಧ್ಯೆ ಯಾವುದೇ ಪ್ರಶ್ನೆಯನ್ನು ಬಿಡದಿರುವುದು. ೨. ಮೊದಲು, ಆಲೋಚನೆಗೆ ಅವಕಾಶವಿಲ್ಲದ ಅಥವಾ ಸರಳ ಲೆಕ್ಕಾಚಾರವಿರುವ ಪ್ರಶ್ನೆಗಳನ್ನು ಆರಿಸಿಕೊಳ್ಳುವುದು. ಆಮೇಲೆ ಕಷ್ಟವಾದ ಪ್ರಶ್ನೆಗಳನ್ನು ಉತ್ತರಿಸಲು ಆರಂಭಿಸುವುದು. ೩. ಮೊದಲು ಕಷ್ಟವಾದ ಪ್ರಶ್ನೆಗಳಿಗೆ ಉತ್ತರಿಸುವುದು; ಅನಂತರ ಸುಲಭವಾದ ಪ್ರಶ್ನೆಗಳನ್ನು ಆಯ್ಕೆಮಾಡಿಕೊಳ್ಳುವುದು.

ಇವುಗಳಲ್ಲಿ ಮೊದಲನೆಯ ವಿಧಾನವೇ ಅತ್ಯಂತ ವೇಗವಾದ ವಿಧಾನ. ಆದರೆ ನೀವು ಮಧ್ಯದಲ್ಲಿ ಯಾವ ಪ್ರಶ್ನೆಗೂ ಹೆಚ್ಚು ಸಮಯವನ್ನು ವ್ಯರ್ಥಮಾಡಬಾರದು. ಯಾವುದೇ ಪ್ರಶ್ನೆಯ ಬಗ್ಗೆ ನಿಮಗೆ ಸಂದೇಹ ಇದ್ದರೆ, ಅದನ್ನು ಬಿಟ್ಟು ಮುಂದೆ ಹೋಗಿ. ಎರಡನೆಯ ವಿಧಾನದಲ್ಲಿ, ನಿಮಗೆ ಖಚಿತವಾದ ಪ್ರಶ್ನೆಗಳನ್ನು ನೀವು ಆರಿಸಿಕೊಳ್ಳುವುದರಿಂದ, ನೀವು ಸಮಯವನ್ನು ಉಳಿಸುತ್ತೀರಿ. ಇದರಿಂದ ಕಷ್ಟದ ಸಮಸ್ಯೆಗಳನ್ನು ಬಿಡಿಸಲು ನಿಮಗೆ ಹೆಚ್ಚು ಸಮಯ ದೊರಕುತ್ತದೆ. ಮೂರನೆಯ ವಿಧಾನವೂ ಒಳ್ಳೆಯ ವಿಧಾನವೇ. ಪರೀಕ್ಷೆಯ ಆರಂಭದಲ್ಲಿ ನಿಮ್ಮ ಮನಸ್ಸು ಲವಲವಿಕೆಯಿಂದ ಕೂಡಿರುತ್ತದೆ. ಆಗ ಕಷ್ಟವಾದ ಪ್ರಶ್ನೆಗಳಿಗೆ ಉತ್ತರ ಗುರುತಿಸುವುದು ಪ್ರಯಾಸದಾಯಕವಾಗುವುದಿಲ್ಲ. ಪರೀಕ್ಷೆ ಮುಂದುವರಿದಂತೆ, ಮಾನಸಿಕ ಶ್ರಮ ಜಾಸ್ತಿಯಾಗುತ್ತದೆ. ಆಗ ಸುಲಭವಾದ ಪ್ರಶ್ನೆಗಳನ್ನು ಉತ್ತರಿಸುವುದು ಒಳ್ಳೆಯದು.

ಮೇಲಿನವುಗಳಲ್ಲಿ ಯಾವ ವಿಧಾನವನ್ನು ನೀವು ಆರಿಸಿಕೊಂಡರೂ, ಒಂದು ಅಂಶವನ್ನು ಮರೆಯಬೇಡಿ. ಪ್ರತಿಯೊಂದು ಪ್ರಶ್ನೆಗೂ ಉತ್ತರವನ್ನು ತಪ್ಪದೇ ಗುರುತಿಸಿ. ಅದಕ್ಕಾಗಿ ಸಾಕಷ್ಟು ಸಮಯವನ್ನು ಉಳಿತಾಯ ಮಾಡಿಕೊಳ್ಳಿ. ಸರಿಯೋ, ತಪ್ಪೋ, ಪ್ರತಿ ಪ್ರಶ್ನೆಗೂ ಉತ್ತರವನ್ನು ತಪ್ಪದೆ ಗುರುತಿಸಿ. ಯಾವ ಪ್ರಶ್ನೆಯನ್ನೂ ಬಿಟ್ಟು ಬಿಡಬೇಡಿ. ಊಹೆ ಮಾಡುವುದು ತಪ್ಪಲ್ಲ. ಅದು ಕೆಲವೊಮ್ಮೆ ಅದು ಸರಿಯೂ ಆಗಿರಬಹುದು. ಆದರೆ, ಆಯ್ಕೆ ಮಾಡಿದ ಎಲ್ಲ ಉತ್ತರಗಳೂ ಖಚಿತವಾಗಿ ಸರಿಯಾಗಿರುವಂತೆ ಪ್ರಯತ್ನಿಸಿ. ಅದಕ್ಕಾಗಿ ನಿಮ್ಮ ಅಧ್ಯಯನ ಉತ್ತಮವಾಗಿರಬೇಕು.

## ದೀರ್ಘವಾದ ಉತ್ತರಗಳನ್ನು ಬರೆಯುವ ವಿಧಾನ

ಪರೀಕ್ಷೆಯಲ್ಲಿ ಬರೆಯುವ ಬರಹ ಯೋಜನಾಬದ್ಧವಾಗಿರಬೇಕು. ನೋಡುವುದಕ್ಕೆ ಅಂದವಾಗಿರಬೇಕು. ಹಾಗೆ ಉತ್ತರ ಬರೆದ ವಿದ್ಯಾರ್ಥಿಗೆ ಹೆಚ್ಚಿನ ಅಂಕ ಸಿಗುತ್ತದೆ. ಇನ್ನೊಬ್ಬ ವಿದ್ಯಾರ್ಥಿ, ಇವನಷ್ಟೇ ಬುದ್ಧಿಶಾಲಿಯಾಗಿದ್ದರೂ, ಅವನ ಬರಹ ಯೋಜನಾರಹಿತವಾಗಿ, ನೋಡುವುದಕ್ಕೆ ಅಂದವಾಗಿಲ್ಲದಿದ್ದರೆ, ಅಷ್ಟೊಂದು ಅಂಕಗಳನ್ನು ಪಡೆಯಲು ಅವನಿಗೆ ಸಾಧ್ಯವಾಗುವುದಿಲ್ಲ. ಹೀಗಾಗಿ **ಸರಿಯಾದ ಯೋಜನೆ** ಮತ್ತು **ಅಂದವಾದ ಬರವಣಿಗೆ** – ಇವು ಬಹಳ ಮುಖ್ಯ. ಹೀಗೆ ಬರೆಯುವ ಕಲೆಯನ್ನು ರೂಢಿಸಿಕೊಳ್ಳಬೇಕು. ಇದಕ್ಕಾಗಿ ಕೆಳಗಿನ ನಿಯಮಗಳನ್ನು ಪಾಲಿಸಬೇಕು: